ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ)

**ಎಸ್ .ಸಿ. ಸಂಖ್ಯೆ 5028/2025**

ಫಿರ್ಯಾದಿಃ ರಾಜ್ಯದ ಪರವಾಗಿ ಕೊಳ್ಳೇಗಾಲ ಪಟ್ಟಣ ಠಾಣೆ ಪೊಲೀಸರು

ವಿರುದ್ಧ

ಆರೋಪಿತರುಃ 1) ಚೇತನ್
2) ಸಿದ್ದಾಜಮ್ಮ
3) ಸೋಮಯ್ಯ

**ದೋಷಾರೋಪಣೆ**

ಟಿ.ಸಿ. ಶ್ರೀಕಾಂತ್, ಬಿ.ಕಾಂ. ಎಲ್ಎಲ್ಬಿ., ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ) ಆದ ನಾನು,

ಆರೋಪಿತರಾದ – 1) ಚೇತನ್
2) ಸಿದ್ದಾಜಮ್ಮ
3) ಸೋಮಯ್ಯ

ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ಮೊದಲನೆಯದಾಗಿ, ಕೊಳ್ಳೇಗಾಲ ಪಟ್ಟಣ ಪೊಲೀಸ್ ಠಾಣೆಗೆ ಸೇರಿದ ಕೊಳ್ಳೇಗಾಲ ತಾಲ್ಲೂಕು ಟಿ.ಸಿ ಹುಂಡಿ ಗ್ರಾಮದ ವಾಸಿಯಾದ ಸಾಕ್ಷಿ 01 ರವರ ತಂಗಿ ಕವಿತಾ ಇವರನ್ನು 1ನೇ ಆರೋಪಿಯಾದ ನೀವು ದಿನಾಂಕ 30–11–2022 ರಂದು ಬಿಸಲವಾಡಿ ಗ್ರಾಮದ ಅಂಬೇಡ್ಕರ್ ಭವನದಲ್ಲಿ ಮದುವೆ ಮಾಡಿಕೊಂಡಿದ್ದು, ಮದುವೆ ಮಾಡಿಕೊಳ್ಳಲು 5 ಗ್ರಾಂ ತೂಕದ ಚಿನ್ನದ ಉಂಗುರ, 20 ಗ್ರಾಂ ತೂಕದ ಬ್ರಾಸ್ಲೇಟ್, ಸೂಟುಬೂಟುಗಳನ್ನು ವರದಕ್ಷಿಣೆಯಾಗಿ ಕೊಡುವಂತೆ ಬೇಡಿಕೆ ಇಟ್ಟಿದ್ದು, ಮದುವೆಗೆ ಮುಂಚಿತವಾಗಿ 1.25,000/–ರೂಪಾಯಿ ಹಾಗೂ 5 ಗ್ರಾಂ ಚಿನ್ನದ ಉಂಗುರವನ್ನು ಆರೋಪಿತರಾದ ನೀವು ವರದಕ್ಷಿಣೆಯಾಗಿ ಸಾಕ್ಷಿ–1 ರವರ ಮನೆಯಿಂದ

ಪಡೆದುಕೊಂಡಿದ್ದು, ಮದುವೆಯಾದ ಒಂದು ತಿಂಗಳ ನಂತರ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ನಿಶ್ಚಿತಾರ್ಥದ ಸಮಯದಲ್ಲಿ ವರದಕ್ಷಿಣೆಯಾಗಿ ಮಾತಾಡಿದ್ದ 20 ಗ್ರಾಂ ಚಿನ್ನದ ಬ್ರೇಸ್ಲೆಟ್ ಹಾಗೂ ವ್ಯಾಪಾರ ಮಾಡಲು 2 ಲಕ್ಷ ರೂಪಾಯಿಯನ್ನು ತವರು ಮನೆಯಿಂದ ತರುವಂತೆ ಕವಿತಾಳಿಗೆ ಹೊಡೆದು ಬಡಿದು ಹಲ್ಲೆ ಮಾಡಿ ದೈಹಿಕ ಮಾನಸಿಕ ಹಿಂಸೆ ನೀಡಿ, ವರದಕ್ಷಿಣೆಯನ್ನು ತರದಿದ್ದರೆ 1ನೇ ಆರೋಪಿಯಾದ ನಿಮಗೆ ಬೇರೆ ಕಡೆ ಮದುವೆ ಮಾಡುವುದಾಗಿ ಹಿಂಸೆ ನೀಡಿರುತ್ತೀರಿ, ಆ ಮೂಲಕ ಭಾ ದಂ ಸಂ ಕಲಂ 498(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಎರಡನೆಯದಾಗಿ, 1ನೇ ಆರೋಪಿಯಾದ ನೀವು ದಿನಾಂಕ 30-11-2022 ರಂದು ಬಿಸಲವಾಡಿ ಗ್ರಾಮದ ಅಂಬೇಡ್ಕರ್ ಭವನದಲ್ಲಿ ಮದುವೆ ಮಾಡಿಕೊಂಡಿದ್ದು, ಮದುವೆಗೆ ಮುಂಚಿತವಾಗಿ 1.25,000/-ರೂಪಾಯಿ ಹಾಗೂ 5 ಗ್ರಾಂ ಚಿನ್ನದ ಉಂಗುರವನ್ನು ಆರೋಪಿತರಾದ ನೀವು ವರದಕ್ಷಿಣೆಯಾಗಿ ಸಾಕ್ಷಿ-1 ರವರ ಮನೆಯಿಂದ ಪಡೆದುಕೊಂಡಿದ್ದು, ಮದುವೆಯಾದ ಒಂದು ತಿಂಗಳ ನಂತರ ಆರೋಪಿತರಾದ ನೀವು ನಿಶ್ಚಿತಾರ್ಥದ ಸಮಯದಲ್ಲಿ ವರದಕ್ಷಿಣೆಯಾಗಿ ಮಾತಾಡಿದ್ದ 20 ಗ್ರಾಂ ಚಿನ್ನದ ಬ್ರೇಸ್ಲೆಟ್ ಹಾಗೂ ವ್ಯಾಪಾರ ಮಾಡಲು 2 ಲಕ್ಷ ರೂಪಾಯಿಯನ್ನು ತವರು ಮನೆಯಿಂದ ತರುವಂತೆ ಕವಿತಾಳಿಗೆ ಹೊಡೆದು ಬಡಿದು ಹಲ್ಲೆ ಮಾಡಿ ದೈಹಿಕ ಮಾನಸಿಕ ಹಿಂಸೆ ನೀಡಿ, ವರದಕ್ಷಿಣೆಯನ್ನು ತರದಿದ್ದರೆ 1ನೇ ಆರೋಪಿಯಾದ ನಿಮಗೆ ಬೇರೆ ಕಡೆ ಮದುವೆ ಮಾಡುವುದಾಗಿ ಹಿಂಸೆಕೊಡುತ್ತಿದ್ದರಿಂದ, ಕವಿತಾರವರು ಆರೋಪಿತರಾದ ನಿಮ್ಮ ಹಿಂಸೆ ತಾಳಲಾರದೆ ದಿನಾಂಕ.17-05-2024 ರಂದು ತವರು ಮನೆಗೆ ಬಂದು ಉಳಿದುಕೊಂಡು, ಆರೋಪಿತರಾದ ನೀವು ನೀಡುತ್ತಿದ್ದ ದೈಹಿಕ ಮತ್ತು ಮಾನಸಿಕ ಹಿಂಸೆ ಹಾಗೂ ವರದಕ್ಷಣೆ ಕಿರುಕುಳವನ್ನು ತಾಳಲಾರದೇ ಜೀವನದಲ್ಲಿ ಬೇಸತ್ತು ದಿನಾಂಕ 31-05-2024 ಸಂಜೆ 6-30 ಗಂಟೆ ಸಮಯದಲ್ಲಿ ಸಾಕ್ಷಿ-1 ರವರ ವಾಸದ ಮನೆಯ ಅಡುಗೆ ಮನೆಯ ಆರ್.ಸಿ.ಸಿ ಮೇಲ್ಚಾವಣಿಯ ಕಬ್ಬಿಣದ ಕೊಕ್ಕೆಗೆ ಕವಿತಾರವರು ವೇಲ್‌ನಿಂದ ನೇಣು ಹಾಕಿಕೊಂಡು ಮೃತಪಟ್ಟಿದ್ದು, ಆ ಮೂಲಕ ಆರೋಪಿತರಾದ ನೀವು ಭಾ ದಂ ಸಂ ಕಲಂ 306 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಮೂರನೆಯದಾಗಿ, 1ನೇ ಆರೋಪಿಯಾದ ನೀವು ದಿನಾಂಕ 30-11-2022 ರಂದು ಬಿಸಲವಾಡಿ ಗ್ರಾಮದ ಅಂಬೇಡ್ಕರ್ ಭವನದಲ್ಲಿ ಮದುವೆ ಮಾಡಿಕೊಂಡಿದ್ದು, ಮದುವೆಗೆ ಮುಂಚಿತವಾಗಿ 1.25,000/-ರೂಪಾಯಿ ಹಾಗೂ 5 ಗ್ರಾಂ ಚಿನ್ನದ ಉಂಗುರವನ್ನು ಆರೋಪಿತರಾದ ನೀವು ವರದಕ್ಷಿಣೆಯಾಗಿ ಸಾಕ್ಷಿ-1 ರವರ ಮನೆಯಿಂದ ಪಡೆದುಕೊಂಡಿದ್ದು,

ಮದುವೆಯಾದ ಒಂದು ತಿಂಗಳ ನಂತರ ಆರೋಪಿತರಾದ ನೀವು ನಿಶ್ಚಿತಾರ್ಥದ ಸಮಯದಲ್ಲಿ ವರದಕ್ಷಿಣೆಯಾಗಿ ಮಾತಾಡಿದ್ದ 20 ಗ್ರಾಂ ಚಿನ್ನದ ಬ್ರಾಸ್ಲೇಟ್ ಹಾಗೂ ವ್ಯಾಪಾರ ಮಾಡಲು 2 ಲಕ್ಷ ರೂಪಾಯಿಯನ್ನು ತವರು ಮನೆಯಿಂದ ತರುವಂತೆ ಕವಿತಾಳಿಗೆ ಹೊಡೆದು ಬಡಿದು ಹಲ್ಲೆ ಮಾಡಿ ದೈಹಿಕ ಮಾನಸಿಕ ಹಿಂಸೆ ನೀಡಿ, ವರದಕ್ಷಿಣೆಯನ್ನು ತರದಿದ್ದರೆ 1ನೇ ಆರೋಪಿಯಾದ ನಿಮಗೆ ಬೇರೆ ಕಡೆ ಮದುವೆ ಮಾಡುವುದಾಗಿ ಹಿಂಸೆಕೊಡುತ್ತಿದ್ದರಿಂದ, ಕವಿತಾರವರು ಆರೋಪಿತರಾದ ನಿಮ್ಮ ಹಿಂಸೆ ತಾಳಲಾರದೆ ದಿನಾಂಕ.17-05-2024 ರಂದು ತವರು ಮನೆಗೆ ಬಂದು ಉಳಿದುಕೊಂಡು, ಆರೋಪಿತರಾದ ನೀವು ನೀಡುತ್ತಿದ್ದ ದೈಹಿಕ ಮತ್ತು ಮಾನಸಿಕ ಹಿಂಸೆ ಹಾಗೂ ವರದಕ್ಷಣೆ ಕಿರುಕುಳವನ್ನು ತಾಳಲಾರದೇ ಜೀವನದಲ್ಲಿ ಬೇಸತ್ತು ದಿನಾಂಕ 31-05-2024 ಸಂಜೆ 6-30 ಗಂಟೆ ಸಮಯದಲ್ಲಿ ಸಾಕ್ಷಿ-1 ರವರ ವಾಸದ ಮನೆಯ ಅಡುಗೆ ಮನೆಯ ಆರ್.ಸಿ.ಸಿ ಮೇಲ್ಚಾವಣಿಯ ಕಬ್ಬಿಣದ ಕೊಕ್ಕೆಗೆ ಕವಿತಾರವರು ವೇಲ್‌ನಿಂದ ನೇಣು ಹಾಕಿಕೊಂಡು ಮೃತಪಟ್ಟಿದ್ದು, ಸದರಿ ಕವಿತಾ ಇವರು ವಿವಾಹವಾದ 7 ವರ್ಷಗಳ ಒಳಗೆ ಅಸ್ವಾಭಿಕವಾಗಿ ಅಂದರೆ ನೇಣು ಹಾಕಿಕೊಂಡು ಮೃತಪಟ್ಟಿರುತ್ತಾರೆ ಆ ಮೂಲಕ ಆರೋಪಿತರಾದ ನೀವು ಭಾ ದಂ ಸಂ ಕಲಂ 304(ಬಿ) ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಕೊನೆಯದಾಗಿ ಆರೂಾಪಿತರಾದ ನೀವು ಮೃತ ಕವಿತಾಳನ್ನು ಮದುವೆಯಾಗುವ ಕಾಲಕ್ಕೆ 5 ಗ್ರಾಂ ತೂಕದ ಚಿನ್ನದ ಉಂಗುರ, 20 ಗ್ರಾಂ ತೂಕದ ಬ್ರಾಸ್ಲೇಟ್, ಸೂಟುಬೂಟುಗಳನ್ನು ವರದಕ್ಷಿಣೆಯಾಗಿ ಕೊಡುವಂತೆ ಒತ್ತಾಯ ಮಾಡಿದ್ದು, ಅದರಂತೆ ಮದುವೆಗೆ ಮುಂಚಿತವಾಗಿ 1.25,000/-ರೂಪಾಯಿ ಹಾಗೂ 5 ಗ್ರಾಂ ಚಿನ್ನದ ಉಂಗುರವನ್ನು ಆರೋಪಿತರಾದ ನೀವು ವರದಕ್ಷಿಣೆಯಾಗಿ ಸಾಕ್ಷಿ-1 ರವರ ಮನೆಯಿಂದ ಪಡೆದುಕೊಂಡಿರುತ್ತೀರಿ, ಆ ಮೂಲಕ ವರದಕ್ಷಿಣೆ ನಿಷೇದ ಕಾಯ್ದೆ ಕಲಂ 3 ಮತ್ತು 4 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ದಿನಾಂಕ 20-9-2025.

(ಟಿ.ಸಿ. ಶ್ರೀಕಾಂತ್)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ಚಾಮರಾಜನಗರ
(ಪೀಠಾಸೀನ ಕೊಳ್ಳೇಗಾಲ)

<u>ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ)</u>

**<u>ಎಸ್ .ಸಿ. ಸಂಖ್ಯೆ 5028/2025</u>**

<u>ಫಿರ್ಯಾದಿಃ</u> ರಾಜ್ಯದ ಪರವಾಗಿ ಕೊಳ್ಳೇಗಾಲ ಪಟ್ಟಣ ಠಾಣೆ ಪೊಲೀಸರು

ವಿರುದ್ಧ

<u>ಆರೋಪಿತರುಃ</u> 1) ಚೇತನ್
ಬಿನ್ ಸೋಮಯ್ಯ
34 ವರ್ಷ,
ಬಿಸಿಲವಾಡಿ ಗ್ರಾಮ,
ಚಾಮರಾಜನಗರ ತಾಲ್ಲೂಕು.

**<u>ದೋಷಾರೋಪಣೆ</u>**

ಪ್ರಶ್ನೆಃ 1: ಮೇಲೆ ಓದಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೆ?
ಉತ್ತರಃ

ಪ್ರಶ್ನೆಃ 2: ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ

ದಿನಾಂಕಃ 20-9-2025

(ಟಿ.ಸಿ. ಶ್ರೀಕಾಂತ್)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ಚಾಮರಾಜನಗರ
(ಪೀಠಾಸೀನ ಕೊಳ್ಳೇಗಾಲ)

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ)**

**ಎಸ್ .ಸಿ. ಸಂಖ್ಯೆ 5028/2025**

ಫಿರ್ಯಾದಿಃ ರಾಜ್ಯದ ಪರವಾಗಿ ಕೊಳ್ಳೇಗಾಲ ಪಟ್ಟಣ ಠಾಣೆ ಪೊಲೀಸರು

ವಿರುದ್ಧ

ಆರೋಪಿತರುಃ 2) ಸಿದ್ದಾಜಮ್ಮ
ಕೋಂ ಸೋಮಯ್ಯ
48 ವರ್ಷ,
ಬಿಸಿಲವಾಡಿ ಗ್ರಾಮ,
ಚಾಮರಾಜನಗರ ತಾಲ್ಲೂಕು.

**ದೋಷಾರೋಪಣೆ**

ಪ್ರಶ್ನೆಃ 1: ಮೇಲೆ ಓದಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೆ?
ಉತ್ತರಃ

ಪ್ರಶ್ನೆಃ 2: ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ

ದಿನಾಂಕಃ 20-9-2025

(ಟಿ.ಸಿ. ಶ್ರೀಕಾಂತ್)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ಚಾಮರಾಜನಗರ
(ಪೀಠಾಸೀನ ಕೊಳ್ಳೇಗಾಲ)

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ)

**ಎಸ್ .ಸಿ. ಸಂಖ್ಯೆ 5028/2025**

ಫಿರ್ಯಾದಿಃ ರಾಜ್ಯದ ಪರವಾಗಿ ಕೊಳ್ಳೇಗಾಲ ಪಟ್ಟಣ ಠಾಣೆ ಪೊಲೀಸರು

ವಿರುದ್ಧ

ಆರೋಪಿತರುಃ 3) ಸೋಮಯ್ಯ
ಬಿನ್ ಲೇಟ್ ಹನುಮಯ್ಯ
60 ವರ್ಷ,
ಬಿಸಿಲವಾಡಿ ಗ್ರಾಮ,
ಚಾಮರಾಜನಗರ ತಾಲ್ಲೂಕು.

**ದೋಷಾರೋಪಣೆ**

ಪ್ರಶ್ನೆಃ 1: ಮೇಲೆ ಓದಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೆ?
ಉತ್ತರಃ

ಪ್ರಶ್ನೆಃ 2: ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ

ದಿನಾಂಕಃ 20-9-2025

(ಟಿ.ಸಿ. ಶ್ರೀಕಾಂತ್)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ಚಾಮರಾಜನಗರ
(ಪೀಠಾಸೀನ ಕೊಳ್ಳೇಗಾಲ)